ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

13

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 17/1/21

# ಐದು ಪಟ್ಟು ಹೆಚ್ಚಳ

ವಿ-ವಾ 17-1-2021

## ರಾಜ್ಯಸಭೆಯಲ್ಲಿ ಪ್ರಾದೇಶಿಕ ಭಾಷೆ ಬಳಕೆ

**ನವದೆಹಲಿ:** ರಾಜ್ಯಸಭಾ ಅಧಿವೇಶನದಲ್ಲಿ 2018ರಿಂದ 2020ರವರೆಗೆ ಪ್ರಾದೇಶಿಕ ಭಾಷೆಗಳ ಬಳಕೆ ಐದು ಪಟ್ಟು ಹೆಚ್ಚಳವಾಗಿದೆ. ಅಧಿಸೂಚಿತ 22 ಭಾಷೆಗಳ ಪೈಕಿ ಹಿಂದಿ, ಇಂಗ್ಲಿಷ್ ನಂತರ ಉರ್ದು, ತಮಿಳು, ಸಂಸ್ಕೃತದ ಬಳಕೆ ಅಧಿಕವಾಗಿದೆ. ಈ ಅವಧಿಯಲ್ಲಿ ಕನ್ನಡ ಐದು ಬಾರಿಯಷ್ಟೆ ಬಳಕೆಯಾಗಿದೆ.



» **2018ರಿಂದ 2020ರವರೆಗೆ ಕನ್ನಡ ಐದು ಸಾರಿ ಪ್ರಯೋಗ**

2004ರಿಂದ 2017ರವರೆಗಿನ 14 ವರ್ಷದ ಮೇಲ್ಮನೆ ಅಧಿವೇಶನದಲ್ಲಿ ಪ್ರಾದೇಶಿಕ ಭಾಷೆಯನ್ನು ಸಂಸದರು ಬಳಸಿರುವ ಪ್ರಮಾಣಕ್ಕೆ ಹೋಲಿಸಿದರೆ 2018ರಿಂದ 2020ರವರೆಗೆ ಶೇಕಡ 512ರಷ್ಟು ಏರಿಕೆ ಕಂಡಿದೆ ಎಂದು ರಾಜ್ಯಸಭಾ ಸಚಿವಾಲಯ ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಡೋಗ್ರಿ, ಕಾಶ್ಮೀರಿ, ಕೊಂಕಣಿ ಮತ್ತು ಸಂಥಾಲಿ ಭಾಷೆಗಳು ಮೊದಲ ಬಾರಿಗೆ ಬಳಕೆಯಾಗಿದ್ದು, ಅಸ್ಸಾಮಿ, ಬೋಡೋ, ಗುಜರಾತಿ, ಮಥಲಿ, ಮಣಿಪುರಿ, ನೇಪಾಳಿ ಭಾಷೆಗಳನ್ನು ದೀರ್ಘಾವಧಿಯ ನಂತರ ಮಾತನಾಡಲಾಗಿದೆ. 2004ರಿಂದ 2017ರವರೆಗೆ ಇಂಗ್ಲಿಷ್, ಹಿಂದಿ ಬಿಟ್ಟು ಅನ್ಯ 10 ಭಾಷೆಗಳನ್ನು 923 ಕಲಾಪಗಳಲ್ಲಿ 269 ಸಲ (ಶೇ. 0.291) ಪ್ರಯೋಗಿಸಲಾಗಿದೆ. 20018ರಿಂದ 2020ರವರೆಗೆ 33 ಕಲಾಪಗಳಲ್ಲಿ 49 ಸಾರಿ (ಶೇ. 1.49) ಪ್ರಾದೇಶಿಕ ಭಾಷೆ ಬಳಕೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ. 2017ರಲ್ಲಿ ಎಂ.ವೆಂಕಯ್ಯನಾಯ್ಡು ಉಪರಾಷ್ಟ್ರಪತಿಗಳಾದ ಬಳಿಕ (ಪದ ನಿಮಿತ್ತ ಅವರೇ ಮೇಲ್ಮನೆಯ ಸಭಾಧ್ಯಕ್ಷರು) ಪ್ರಾದೇಶಿಕ ಭಾಷೆ ಬಳಸುವಂತೆ ಸದಸ್ಯರಿಗೆ ಉತ್ತೇಜನ ನೀಡುತ್ತಿದ್ದಾರೆ. ಹೀಗಾಗಿ ಭಾರತದ ಇತರ ಭಾಷೆಗಳು ರಾಜ್ಯಸಭೆಯಲ್ಲಿ ಹೆಚ್ಚು ಹೆಚ್ಚು ಕೇಳುತ್ತಿವೆ.